-34-

**UN – 509**

III SEM B.COM NOV / DEC

**ಮೂರನೆಯ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2015**

REPEATERS **(ರಿಪೀಟರ್ಸ್) (2012-13 and Onwards)**

**ಕನ್ನಡ ಭಾಷಾ ಪತ್ರಿಕೆ – III**

**ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 100

ST. ALOYSIUS COLLEGE LIBRARY

**ಭಾಗ – 1**

**ಸಾಹಿತ್ಯ ಸಲ್ಲಾಪ - ೨**

I. ಈ ಪದ್ಯದ ಭಾವಾರ್ಥ ಬರೆಯಿರಿ : **(1×5=5)**

ನಾವಿಬ್ಬರೂ ನೆರೆಹೊರೆ. ರೈತರು. ಮಹಾ
ಕಾಲೇಶ್ವರನ ಕಂಡು, ಹರ್ಷಗೊಂಡು
ದೊಡ್ಡವರು ತಾವೆಂದು ಕೇಳಿಬಂದೆವು ಇ
ಲ್ಲಿ, ಹೋಗೋಣವೆಂದು ತಮ್ಮನ್ನು ಕಂಡು
ಕವಿರತ್ನ ಕಾಳಿದಾಸರು ನೀವೇ ಅಲ್ಲವೇ ?...!

II. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(3×5=15)**

1) ಅಶ್ವತ್ಥಾಮ ಲಕ್ಷ್ಮಿಯನ್ನು ನಿಂದಿಸಿದ ಬಗೆ.
2) ರೈತರು ಕವಿಯ ಬಳಿ ಏನನ್ನು ಪ್ರಾರ್ಥಿಸುತ್ತಾರೆ ?
3) ಬಸವಣ್ಣ ಭಂಡಾರಿ ಪದವಿಯನ್ನು ತಿರಸ್ಕರಿಸಿದ ಪ್ರಸಂಗ.
4) 'ಕಳ್ಳುಬಳ್ಳಿ' ಕಥೆಯ ಬಸ್ವಿಯ ಪಾತ್ರವನ್ನು ಚಿತ್ರಿಸಿ.
5) ಕನ್ನಡ ಸಂಸ್ಕೃತಿಯನ್ನು ಕುರಿತು ಕನ್ನಡಿಗರ ಭಾವನೆ ಏನು ? ಕಾರಂತರ ಅಭಿಪ್ರಾಯದ ಹಿನ್ನೆಲೆಯಲ್ಲಿ ಬರೆಯಿರಿ.

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×12=36)**

1) 'ನಿನ್ನಿಂ ನಿಕೃಷ್ಟರೆಂಬರುಮೊಳರೆ' ಪದ್ಯದಲ್ಲಿ ಅಶ್ವತ್ಥಾಮನ ಸ್ವಾಮಿಭಕ್ತಿ-ನಿಷ್ಠೆಗಳು ಹೇಗೆ ಮೂಡಿಬಂದಿವೆ ? ವಿವರಿಸಿ.
2) 'ಇಬ್ಬರು ರೈತರು'-ಕವಿತೆಯ ಆಶಯವೇನು ? ವಿವರಿಸಿ.
3) 'ತಲೆದಂಡ' ನಾಟಕದ ಜಗದೇವನ ಪಾತ್ರವನ್ನು ಚಿತ್ರಿಸಿ.
4) ಕೆಂಚನ ಕುಟುಂಬವು ಹತ್ತಿರದವರಿಂದಲೇ ಶೋಷಣೆಗೆ ಒಳಗಾಗುವ ಪರಿಸ್ಥಿತಿಯ ವ್ಯಂಗ್ಯವನ್ನು 'ಕಳ್ಳುಬಳ್ಳಿ' ಕತೆ ಹೇಗೆ ಬಿಂಬಿಸಿದೆ ? ವಿವರಿಸಿ.
5) 'ಕೈ ಹಿಡಿದವರು' ಪ್ರಬಂಧದ ಆಶಯವನ್ನು ವಿವರಿಸಿ.

## ಭಾಗ – 2

## ವ್ಯಾವಹಾರಿಕ ಕನ್ನಡ

I. ಮೂರಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ : (3×5=15)

1) ತಲೆಬರಹ/ಶಿರೋನಾಮೆ
2) ಆದೇಶಪತ್ರಗಳು
3) ಸುತ್ತೋಲೆ
4) ದೂರುಗಳು
5) ಅಭ್ಯರ್ಥನ ಪತ್ರ

II. ಈ ಗದ್ಯಭಾಗವನ್ನು ಸಂಕ್ಷಿಪ್ತಗೊಳಿಸಿ ಶೀರ್ಷಿಕೆಯನ್ನು ಬರೆಯಿರಿ : (1×5=5)

ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಅಭಿವೃದ್ಧಿಯಲ್ಲಿ ತಂತ್ರಜ್ಞಾನಕ್ಕಿರುವ ಪ್ರಾಧಾನ್ಯವನ್ನು ಉತ್ಪ್ರೇಕ್ಷಿಸಬೇಕಾದ ಅಗತ್ಯವಿಲ್ಲ. ಒಂದು ದೇಶದಲ್ಲಿ ಸಾಕಷ್ಟು ಬಂಡವಾಳವಿದ್ದರೂ ಅಷ್ಟರಿಂದಲೇ ಕೈಗಾರಿಕೆ ಬೆಳೆಯುವುದಿಲ್ಲ, ಉತ್ಪಾದನೆ ಹೆಚ್ಚುವುದಿಲ್ಲ, ನಿರುದ್ಯೋಗ ನೀಗುವುದಿಲ್ಲ. ಈ ಮೂರನ್ನು ತೃಪ್ತಿಕರವಾಗಿ ಸಾಧಿಸಲು ಆಯಾ ದೇಶದ ಜಾಯಮಾನಕ್ಕೆ ಹೊಂದಿಕೊಳ್ಳುವಂಥ ವಿಶಿಷ್ಟ ತಂತ್ರಜ್ಞಾನ ಬೇಕಾಗುತ್ತದೆ. ಏಕೆಂದರೆ ವಿದೇಶಗಳಿಂದ ಆಮದು ಮಾಡಿಕೊಂಡ ತಂತ್ರಜ್ಞಾನ ವಿದೇಶಿಯಾಗಿಯೇ ಉಳಿಯುತ್ತದೆ. ಅದು ನಮ್ಮದಾಗುವುದಿಲ್ಲ. ಅದರಿಂದ ನಮ್ಮ ಪರಾವಲಂಬನೆ ಹೆಚ್ಚಬಹುದೇ ಹೊರತು ನೀಗುವುದಿಲ್ಲ. ಪಶ್ಚಿಮ ದೇಶಗಳಲ್ಲಿ ಬಂಡವಾಳಕ್ಕೆ ಕೊರತೆಯಿಲ್ಲ, ಮನುಷ್ಯ ರೂಪದ ಬಂಡವಾಳದ ಕೊರತೆ ಇದೆ. ನಮ್ಮಲ್ಲಿ ತದ್ವಿರುದ್ಧ, ಪರಿಶ್ರಮಕ್ಕೆ ಕೊರತೆಯಿಲ್ಲ. ಮಾನವ ಸಂಪತ್ತು ಬೇಕಾದಷ್ಟಿದೆ. ದುಡಿಯಬಲ್ಲ ಎಲ್ಲ ಕೈಗಳಿಗೂ ಉದ್ಯೋಗ ಒದಗಿಸುವಂಥ ತಂತ್ರಜ್ಞಾನ ನಮಗೆ ಬೇಕು. ನಮ್ಮ ಸಂಪನ್ಮೂಲಗಳನ್ನು ಬಳಸಿಕೊಂಡು ನಮ್ಮ ಅಗತ್ಯಗಳನ್ನು ತೃಪ್ತಿಕರವಾಗಿ ಪೂರೈಸಿಕೊಳ್ಳುವಂಥ ವಿಧಿ ವಿಧಾನಗಳು ಬೇಕು. ವಿಜ್ಞಾನ, ಯಂತ್ರಕೌಶಲ್ಯ, ತಂತ್ರ ಪರಿಣತಿ ಮೊದಲಾದ ವಿಷಯಗಳಲ್ಲಿ ಭಾರತ ಸಾಕಷ್ಟು ಮುಂದುವರಿದಿದೆ. ನಮಗೆ ಸೂಕ್ತವಾದ ತಂತ್ರಜ್ಞಾನವನ್ನು ರೂಪಿಸಿಕೊಳ್ಳುವ ಶಕ್ತಿಯೂ ನಮ್ಮ ಅಳತೆಗೆ ಮೀರಿದುದಲ್ಲ. ಆದರೆ ಅದನ್ನು ಗುರುತಿಸುವ ಕೆಲಸ ಆಗಬೇಕು. ಉತ್ತೇಜನ ನೀಡಿ ಅದನ್ನು ಕಾರ್ಯಕಾರಿಯನ್ನಾಗಿ ಮಾಡಬಲ್ಲ ವ್ಯವಸ್ಥೆ ಬೇಕು. ವಿದೇಶಿ ತಂತ್ರಜ್ಞಾನವನ್ನು ಸ್ವದೇಶದಲ್ಲೇ ದೊರೆಯುವ ತಂತ್ರಜ್ಞಾನದೊಡನೆ ಹೋಲಿಸಿ ಅಧ್ಯಯನ ಮಾಡಿ ನಮಗೆ ಸೂಕ್ತವಾದುದನ್ನು ರೂಪಿಸಿಕೊಳ್ಳಬೇಕು.

III. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2×12=24)

1) ವಿಚಾರಣಾ ಪತ್ರ ಎಂದರೇನು ? ಒಂದು ಮಾದರಿ ಪತ್ರವನ್ನು ಬರೆಯಿರಿ.
2) ವ್ಯವಹಾರ ಪತ್ರದ ವಿವಿಧ ಅಂಗಗಳನ್ನು ಪರಿಚಯಿಸಿ.
3) ಪ್ರಸ್ತುತ ಶೈಕ್ಷಣಿಕ ಸನ್ನಿವೇಶಕ್ಕೆ ನಿಮ್ಮ ಪ್ರತಿಕ್ರಿಯೆಯನ್ನು ಸೂಚಿಸಿ ಪತ್ರಿಕೆಯ 'ವಾಚಕರ ವಾಣಿ' ವಿಭಾಗಕ್ಕೆ ಪತ್ರವೊಂದನ್ನು ಬರೆಯಿರಿ.
4) ಕಾಲೇಜಿನ ಪ್ರಾಂಶುಪಾಲರೊಬ್ಬರು ಸಂಸ್ಥೆಯ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಶಿಸ್ತು ವ್ಯವಸ್ಥೆಗಳನ್ನು ಪಾಲಿಸಬೇಕೆಂದು ನಿರ್ದೇಶಿಸುವ 'ಪರಿಪತ್ರ'ವೊಂದನ್ನು ಬರೆಯಿರಿ.

______________